**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.148/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ. ಕೋಟೆಪ್ಪ |
| ತಂದೆಯ ಹೆಸರು | : | ಲೇಟ್ ರುದ್ರಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಗ್ರಾಮ ಲೆಕ್ಕಾಧಿಕಾರಿ, ಬಾಡಾ ವೃತ್ತ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 2

ದಿ: 17-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಬಾಡಾದಲ್ಲಿ ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ 2020 ರಿಂದ ಇಲ್ಲಿಯವರೆಗೆ ಕಾರ್ಯನಿರ್ವಹಿಸುತ್ತಿದ್ದೇನೆ. ಮೇ 2020 ರಲ್ಲಿ ನಾನು ಬಾಡಾ ವೃತ್ತ ಮತ್ತು ಪ್ರಭಾರ ಅಣಬೇರು ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ದಿಃ 26-05-2020 ರಂದು ದಾವಣಗೆರೆಯ ತಹಶೀಲ್ದಾರರವರ ಆದೇಶದ ಮೇರೆಗೆ ಮಾಯಕೊಂಡದಲ್ಲಿ ಒಂದು ಪ್ರಕರಣ ದಾಖಲಾಗಿರುತ್ತದೆ. ಆದ್ದರಿಂದ ಪಂಚನಾಮೆಗೆ ಪಂಚರಾಗಿ ಸಹಕರಿಸಲು ಮೇಲಾಧಿಕಾರಿಗಳು ಆದೇಶ ಮಾಡಿರುತ್ತಾರೆ. ಆ ಪ್ರಕಾರ ನಾನು ಮತ್ತು ಚಾಸಾ-3 ರವರು ದಿಃ 26-05-2020 ರಂದು ಶಂಕರನಹಳ್ಳಿ ಗ್ರಾಮದ ಸರ್ವೇ ನಂ.25/3 ರ ಕಲ್ಲು ಕ್ವಾರೆ ಬಳಿ ಹೋಗಿದ್ದೆವು. ಅಲ್ಲಿ ಹೋದಾಗ ತನಿಖಾಧಿಕಾರಿಗಳಾದ ಚಾಸಾ-33,

ಗುರುಬಸವರಾಜ, ದೂರುದಾರರಾದ ಚಾಸಾ-1 ರವರು ಇದ್ದರು. ಅಲ್ಲಿ ಚಾಸಾ-1 ರವರು ದಿಃ 25-05-2020 ರಂದು ಶಂಕರನಹಳ್ಳಿ ಅಜ್ಜಿ ಮನೆಗೆ ಕಿರಣ ಕುಮಾರ ಮತ್ತು ಆತನ ಮಗ ಸೃಜನ್ ದಾವಣಗೆರೆಯಿಂದ ಬಂದಿದ್ದರು ಅಂತ ಹೇಳಿದರು. ಕಿರಣ ಕುಮಾರ ಮತ್ತು ಆತನ ಮಗ ಸೃಜನ್ ರವರು ಅಜ್ಜಿ ಊರಿನಲ್ಲಿ ಬಹಿರ್ದೆಸೆಗೆ ಅಥವಾ ಫೋಟೋ ತೆಗೆಯಲು ಅಥವಾ ನೀರು ಕುಡಿಯಲು ಆಕಸ್ಮಿಕವಾಗಿ ಊರಿನ ಪಕ್ಕದಲ್ಲಿರುವ 100 ಮೀ. ಅಂತರದಲ್ಲಿರುವ ರಸ್ತೆಯ ಪಕ್ಕದಲ್ಲಿರುವ ಆಳು ಬಿದ್ದ ಕಲ್ಲು ಕ್ವಾರಿ ಹೊಂಡದ ಹತ್ತಿರ ಹೋಗಿ ಭಾವಚಿತ್ರ ತೆಗೆಯಲು ಹೋದಾಗ ಅವರು ಕಾಲು ಜಾರಿ ಕಲ್ಲು ಕ್ವಾರಿಯಲ್ಲಿರುವಂತಹ ಆಳವಾದ ನೀರು ಇರುವ ಹೊಂಡದಲ್ಲಿ ಬಿದ್ದಿರುತ್ತಾರೆ, ಅದರಿಂದ ಅವರು ಮೃತಪಟ್ಟಿರುತ್ತಾರೆ ಅಂತ ತಿಳಿಸಿದರು. ಆ ಜಾಗವನ್ನು ಅವರು ತೋರಿಸಿಕೊಟ್ಟಿದ್ದು, ಅಲ್ಲಿ ಮಧ್ಯಾಹ್ನ 12.00 ರಿಂದ 1.00 ಗಂಟೆ ಅವಧಿಯಲ್ಲಿ ಮಹಜರ ಮಾಡಿರುತ್ತಾರೆ. ಆ ಮಹಜರನ್ನು ಈಗ ನೋಡುತ್ತಿದ್ದು, ಮಹಜರನ್ನು ಈಗಾಗಲೇ ನಿಪಿ-4 ಅಂತ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಅಂತ ಗುರುತಿಸಲಾಯಿತು. ಆ ಸಂದರ್ಭದಲ್ಲಿ ನಾನು ಈಗ ನೋಡಿದ ನಿಪಿ-5 ರ ಫೋಟೋವನ್ನು ತೆಗೆಯಲಾಯಿತು. ಮಹಜರ ಮಾಡುವ ಕಾಲಕ್ಕೆ ನೋಟಿಸ್ಸಿಗೆ ಸಹಿ ಮಾಡಿಸಿಕೊಂಡಿದ್ದರು. ಆ ನೋಟಿಸ್ಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-6 ಅಂತ, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಅಂತ ಗುರುತಿಸಲಾಯಿತು.

2. ಸರ್ವೇ ನಂಬರ 25/3 ಲಲಿತಮ್ಮ ಕೋಂ ಜಯಪ್ಪರವರ ಹೆಸರಿನಲ್ಲಿದ್ದು, ಅದು 1 ಎಕರೆ ಇರುತ್ತದೆ. ಅದು ರಸ್ತೆಯ ಪಕ್ಕದಲ್ಲಿದ್ದು ಯಾವುದೇ ತಡಗೋಡೆಗಳನ್ನು ಹಾಕಿರಲಿಲ್ಲ, ತಂತಿ ಬೇಲಿ ಹಾಕಿರಲಿಲ್ಲ ಮತ್ತು ಎಚ್ಚರಿಕೆ ಬೋರ್ಡನ್ನು ಸಹ ಹಾಕಿರಲಿಲ್ಲ. ಎಚ್ಚರಿಕೆ ಬೋರ್ಡ ಹಾಕಿದ್ದಲ್ಲಿ ಮೃತರ ಜೀವ ಉಳಿಯುತ್ತಿತ್ತು. ಆ ಊರಿನಲ್ಲಿ ವಿಚಾರಣೆ ಮಾಡಿದಾಗ ಅಲ್ಲಿಯ ಗ್ರಾಮಸ್ಥರು ಆ ಕಲ್ಲುಕ್ವಾರಿಯ ಹೊಂಡಾದಲ್ಲಿ ನೀರು ಇದ್ದು ಸುಮಾರು 10-20 ದನ ಕರುಗಳು ನೀರು ಕುಡಿಯಲು ಹೋಗಿ ಬಿದ್ದು ಸತ್ತಿರುವುದಾಗಿ ವಿಷಯ ತಿಳಿಸಿದರು. ಅದರ ಅಳತೆ 120 ಮೀ. ಉದ್ದ, 60-70 ಮೀ. ಅಗಲ ಸುಮಾರು

30 ಅಡಿ ಆಳವಾಗಿ ಇದ್ದು ನೀರು ತುಂಬಿತ್ತು. ಆ ಕಲ್ಲುಕ್ವಾರಿ ಲಲಿತಮ್ಮರವರ ಹೆಸರಿನಲ್ಲಿದ್ದು, ಮತ್ತು ಅದನ್ನು ಅವರ ಗಂಡ ಜಯಪ್ಪರವರು ನಡೆಸುತ್ತಿದ್ದರು. ಜಯಪ್ಪರವರು ತೀರಿಕೊಂಡ ನಂತರ ಅವರ ಮಗ ಹೇಮರಾಜರವರು ನಡೆಸುತ್ತಿದ್ದರು ಅಂತ ವಿಷಯ ಗೊತ್ತಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಈ ಹಂತದಲ್ಲಿ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುವುದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 20-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಇ.ಎಫ್., ವಕೀಲರಿಂದ ಆರೋಪಿತರ ಪರವಾಗಿ**:

3. ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ 19 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಆದ್ದರಿಂದ ಯಾವ ಯಾವ ಸರ್ವೇ ನಂಬರ ಯಾವ ಯಾವ ಗ್ರಾಮಕ್ಕೆ ಬರುತ್ತದೆ ಅಂತ ಗುರುತಿಸಲು ಬರುತ್ತದೆ. ಕಂಪ್ಯೂಟರ್ ಬರುವ ಪೂರ್ವದಲ್ಲಿ ಯಾವ ಜಮೀನಿನಲ್ಲಿ ಯಾವ ಬೆಳೆ ಇತ್ತು ಅಂತ ನಾವೇ ಬರೆಯುತ್ತಿದ್ದವು. ಸುತ್ತೋಲೆ MRT.No.17/2012-13 ನನಗೆ ಗೊತ್ತಿದೆ. ವಾಸ್ತವಿಕವಾಗಿ ಜಮೀನಿನಲ್ಲಿ ಏನು ಬೆಳೆ ಇರುತ್ತೋ ಅದನ್ನು ನಾವು ನಮೂದು ಮಾಡುತ್ತೇವೆ. ಯಾವ ಬೆಳೆ ಯಾವ ಜಮೀನಿನಲ್ಲಿ ಇರುವುದು ವರ್ಷಕ್ಕೆ ಬದಲಾವಣೆ ಆಗುತ್ತದೆ. ಈಗ ನನಗೆ ತೋರಿಸಿದ RTC ದಾಖಲೆಯಲ್ಲಿ 2012-13 ಕ್ಕೆ ಸರ್ವೇ ನಂಬರ 25/1P2 ನೇದರಲ್ಲಿ ಯಾವ ಬೆಳೆ ಇರುವುದಿಲ್ಲ, ಆದರೆ ಮೆಕ್ಕೆಜೋಳ ಮತ್ತು ಕುಷ್ಕಿ ಅಂತ ಇರುತ್ತದೆ. ಪಿ.ಪಿ. ರವರ ತಕರಾರಿಗೆ ಒಳಪಟ್ಟು RTC ಯನ್ನು ನಿಡಿ-1 ಅಂತ ಗುರುತಿಸಲಾಯಿತು. ದಿಃ 04-06-2013 ರಲ್ಲಿ ಸರ್ವೇ ನಂಬರ 25/3 ಎಂಬುವುದು MRT ನಂಬರ 17/2012-13 ರಲ್ಲಿ ಸರ್ವೇ ನಂಬರ 25/1P2 ಹಿಸ್ಸಾ ಕೋಡ್ ಆಗಿ ಹೊಸ ಹಿಸ್ಸಾ ನಂಬರ ಆಗಿರುತ್ತದೆ. ಈಗ ನನಗೆ ತೋರಿಸಿದ RTC ದಾಖಲೆ 2014-15 ನೇ ಸಾಲಿನದ್ದು ಇರುತ್ತದೆ. ಪಿ.ಪಿ.ರವರ ತಕರಾರಿಗೆ ಒಳಪಟ್ಟು ಈ RTC ದಾಖಲೆಯನ್ನು ನಿಡಿ-2 ಅಂತ ಗುರುತಿಸಲಾಯಿತು.

4. ಅದೇ ರೀತಿ ಈಗ ನನಗೆ ತೋರಿಸಿದ RTC ದಾಖಲೆಗಳು ಸರ್ವೇ ನಂಬರ 25/3, 2017-18, 2020-21, 2021-22, 2023-24, 2024-25 ಕ್ಕೆ ಇರುತ್ತವೆ. ಪಿ.ಪಿ.ರವರ ತಕರಾರಿಗೆ ಒಳಪಟ್ಟು ಈ RTC ದಾಖಲೆಗಳನ್ನು ಕ್ರಮವಾಗಿ ನಿಡಿ-3 ರಿಂದ 7 ಅಂತ ಗುರುತಿಸಲಾಯಿತು. MRT ನಂಬರ 17/2012-13 ರ ಪ್ರಕಾರ ಏನು entry ಆಗಿರುತ್ತೋ ಅದರಂತೆ ಮುಂದುವರೆಸಿಕೊಂಡು ಬಂದಿರುತ್ತದೆ. ಹೇಮರಾಜರವರ ಹೆಸರು RTC ಯಲ್ಲಿ ಇರುವುದಿಲ್ಲ. 2019-20 ನೇ ಸಾಲಿನ RTC ಯಲ್ಲಿ ಜಮೀನು ಲಲಿತಮ್ಮ ಕೋಂ ಜಯಪ್ಪರವರ ಹೆಸರಿನಲ್ಲಿ ಇರುತ್ತದೆ. ನೀರಾವರಿ ಇದ್ದ ಬಗ್ಗೆ

RTC ಯಲ್ಲಿ ನಮೂದು ಇಲ್ಲ. ಈಗ ನನಗೆ ತೋರಿಸಿದ ನಿಡಿ-3 ರಿಂದ 7 ರಲ್ಲಿ ನೀರಾವರಿ ಮೂಲ ಏನೂ ಇಲ್ಲ.

5. ನನಗೆ ಲಿಖಿತವಾದ ಆದೇಶವನ್ನು ತಹಶೀಲ್ದಾರರವರು ಕೊಟ್ಟಿದ್ದರು. ಅದರಂತೆ ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ತಹಶೀಲ್ದಾರರವರು ಇಂತಹದ್ದೇ ಸರ್ವೇ ನಂಬರ ಮತ್ತು ಇಂತಹದ್ದೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಗಬೇಕು ಅಂತ ಹೇಳಿಲ್ಲ ಸಾಕ್ಷಿಗಾಗಿ ಹೋಗಬೇಕು ಅಂತ ಹೇಳಿದ್ದರು. ಪೊಲೀಸರು ನನಗೆ ನೋಟಿಸ್ಸು ಏನೂ ಕೊಟ್ಟಿಲ್ಲ. ಸಾಕ್ಷಿದಾರರು ಹೇಳುತ್ತಾರೆ ತಹಶೀಲ್ದಾರ ಕಛೇರಿಯಿಂದ ಆದೇಶ ಬಂದ ನಂತರ ಪೊಲೀಸರು ಫೋನ್ ಮಾಡಿ ಪಂಚರಾಗಿ ಬರಲು ಹೇಳಿದರು. ಕಲ್ಲು ಕ್ವಾರಿ ಅಂತ ಪಹಣಿಯಲ್ಲಿ ನಮೂದು ಮಾಡುವುದಿಲ್ಲ. ದಿಃ 26-05-2020 ರಂದು ನಾನು ಕಲ್ಲು ಕ್ವಾರಿಗೆ ಪಂಚರಾಗಿ ಹೋಗಿದ್ದೆ ಅಂತ ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ಚಾಸಾ-33 ರವರು ತನಿಖಾಧಿಕಾರಿಗಳು ಇದ್ದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಚಾಸಾ-1 ರವರು ಸ್ಥಳದಲ್ಲಿ ಹಾಜರಿದ್ದ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಕಲ್ಲು ಕ್ವಾರಿ ಬಗ್ಗೆ ಹೇಳಿದ ಸಾಕ್ಷಿ ಎಲ್ಲಾ ಸುಳ್ಳು ಅಂದರೆ ಸರಿಯಲ್ಲ. ನಾನು ಪಂಚನಾಮೆಗೆ ಹೋದಾಗ ಚಾಸಾ-1 ರವರು ನನಗೆ ಕಲ್ಲು ಕ್ವಾರಿಯ ಬಗ್ಗೆ ತಿಳಿಸಿದರು. ಮಹಜರನ್ನು ಮಧ್ಯಾಹ್ನ 12.00-1.00 ಗಂಟೆಯವರೆಗೆ ಮಾಡಿದರು ಅಂತ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-5 ರಂತೆ ಫೋಟೋ ತೆಗೆದಿಲ್ಲ ಮತ್ತು ನಿಪಿ-4(ಬಿ) ಅಂತ ಸಹಿ ಮಾಡಿಲ್ಲ, ನನಗೆ ನೋಟಿಸ್ಸು ಕೊಟ್ಟಿಲ್ಲ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಪೊಲೀಸರು ಬರೆದರು ಅವರ ಹೆಸರು ನನಗೆ ಗೊತ್ತಿಲ್ಲ. ಯಾವ Rank ಪೊಲೀಸರು ಪಂಚನಾಮೆಯನ್ನು ಬರೆದರು ಅಂತ ನನಗೆ ಹೇಳಲು ಬರುವುದಿಲ್ಲ. ನಿಪಿ-4 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಸ್ಥಳಕ್ಕೆ ಕರೆದಿಲ್ಲ ನಾನು ಮಹಜರಗೆ ಸ್ಥಳದಲ್ಲಿ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯ ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಅಲ್ಲಿನ ಊರಿನ

ಜನರು ಸುಮಾರು 10-20 ದನಗಳು ನೀರು ಕುಡಿಯಲು ಹೋಗಿ ಕಲ್ಲು ಕ್ವಾರಿಯಲ್ಲಿ ಬಿದ್ದು ಸತ್ತಿವೆ ಅಂತ ತಿಳಿಸಿದ್ದಾರೆ. ಈ ರೀತಿ ಗ್ರಾಮಸ್ಥರು ನನಗೆ ತಿಳಿಸಿಲ್ಲ ಅಂದರೆ ಸರಿಯಲ್ಲ. ಸರ್ವೇ ನಂ.25/3 ರಲ್ಲಿ ಯಾವುದೇ ಹೊಂಡ ಇಲ್ಲ, ಅದರಲ್ಲಿ 120 ಮೀ. ಉದ್ದ 60-75 ಮೀ. ಅಗಲ ಆಳ ಇದ್ದು ಅದರಲ್ಲಿ ನೀರು ತುಂಬಿತ್ತು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕಲ್ಲು ಕ್ವಾರಿ ಲಲಿತಮ್ಮರವರ ಹೆಸರಿನಲ್ಲಿತ್ತು ಅಂದರೆ ಸರಿಯಲ್ಲ. ಜಯಪ್ಪರವರು ತೀರಿಕೊಂಡ ನಂತರ ಹೇಮರಾಜರವರು ಆ ಕಲ್ಲ ಕ್ವಾರಿಯನ್ನು ನಡೆಸುತ್ತಿದ್ದಾರೆ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.